ಆ) ವಿಮಾನ ನಿಲ್ದಾಣಕ್ಕಾಗಿ ಬಿ.ಐ.ಎ.ಎಲ್ ಸಂಸ್ಥೆಯು ನಿವೇಶನದಲ್ಲಿ ಈಗಾಗಲೇ ಪೂರ್ವಸಿದ್ದತೆಯ ಕೆಲಸಗಳನ್ನು ಪ್ರಾರಂಭಿಸಲಾಗಿದ್ದು. ಜುಲೈ ಮೊದಲ ವಾರದಲ್ಲಿ ಪರಿಪೂರ್ಣ ನಿರ್ಮಾಣ ಚಟುವಟಿಕೆಗಳು ಪ್ರಾರಂಭವಾಗಲಿದೆ.

**೩೮೬೮ (೩೮೦೩) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :-** ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು;

ಆ) ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಮಹಾರಾಷ್ಟ್ರ ಯಾವ ರೀತಿ ಕೇಂದ್ರದಿಂದ ೫೦೦ ಕೋಟಿ ರೂ ಪ್ಯಾಕೇಜ್ ಜಾರಿಗೆ ತಂದಿದೆಯೊ. ಅದೇ ರೀತಿ ರಾಜ್ಯದಲ್ಲೂ ಕೇಂದ್ರದಿಂದ ಪ್ಯಾಕೇಜ್ ತರಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಅಮರೇಗೌಡ ಎಲ್. ಪಾಟೀಲ್ ಬೈಯ್ಯಾಪುರ (ಸಕ್ಕರೆ ಸಚಿವರು) :**

ಅ) ರಾಜ್ಯದಲ್ಲಿ ಒಟ್ಟು ೪೬ ಸಕ್ಕರೆ ಕಾರ್ಖಾನೆಗಳಿವೆ, ನಷ್ಟದಲ್ಲಿರುವ ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಲಯ | ಒಟ್ಟು ಕಾರ್ಖಾನೆ | ನಷ್ಟದಲ್ಲಿರುವ ಕಾರ್ಖಾನೆ |
|---|---|---|---|
| ೦೧ | ಸಹಕಾರಿ | ೨೧ | ೧೪ |
| ೦೨ | ಖಾಸಗಿ | ೨೨ | ೧೫ |
| ೦೩ | ಸರ್ಕಾರಿ | ೦೨ | ೦೨ |
| ೦೪ | ಜಂಟಿ | ೦೧ | ೦೧ |

ಆ) ೨೦೦೨-೦೩ ನೇ ಸಾಲಿನಲ್ಲಿ ಕಬ್ಬು ಬೆಲೆ ಬಾಕಿ ತೀರುವಳಿ ಮಾಡಲು ಮುಕ್ತ ಮಾರುಕಟ್ಟೆಯಲ್ಲಿ ಬಾಂಡ್ ಮೂಲಕ ಹಣ ಸಂಗ್ರಹಿಸುವ ರೂ.೨೯೫.೯೪ ಕೋಟಿಗಳ ಮೊತ್ತದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಅದೇ ರೀತಿ ಸಹಕಾರಿ ರಂಗದ ಸಕ್ಕರೆ ಕಾರ್ಖಾನೆಗಳ ಸರ್ಕಾರಿ ಸಾಲಗಳನ್ನು ಈಕ್ವಿಟಿ ಷೇರುಗಳಾಗಿ ಪರಿವರ್ತಿಸುವ ಬಗ್ಗೆ ರೂ.೧೯೪.೫೯ ಕೋಟಿ ಮೊತ್ತದ ಪ್ರಸ್ತಾವನೆ ಸಹಕಾರ ಇಲಾಖೆಯ ಪರಿಶೀಲನೆಯಲ್ಲಿದೆ.

**೩೮೬೯ (೪೦೪೬) ಶ್ರೀ ಕಿರಣ್ ಕುಮಾರ್ ಕೆ.ಎಸ್ (ಕಳ್ಳಂಬೆಳ್ಳ) :-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳಿಗೆ [ರೈತರಿಗೆ] ಒದಗಿಸುವ ವೈಯಕ್ತಿಕ ಕೊಳವೆ ಬಾವಿ ಯೋಜನೆ ಅನುಷ್ಠಾನಗೊಳಿಸಲು ಅನುಸರಿಸುವ ಮಾರ್ಗಸೂಚಿಗಳೇನು;

ಆ) ಸದರಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ವೈಯಕ್ತಿಕ ಕೊಳವೆ ಬಾವಿ ಕೊರೆಯಿಸಿದ ನಂತರ ವಿದ್ಯುತ್ ಸಂಪರ್ಕ ಸೌಲಭ್ಯಕ್ಕೆ ಯಾವ ಮಾನದಂಡ ಗಳನ್ನು ಉಪಯೋಗಿಸಲಾಗುತ್ತದೆ;

ಇ) ಈ ನಿಟ್ಟಿನಲ್ಲಿ ನಿಗಮದ ಹಾಗೂ ಇಂಧನ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆಯೇ; ಇಲ್ಲದಿದ್ದಲ್ಲಿ ಇದರ ಯೋಜನೆಯು ಫಲಾನುಭವಿಗಳಿಗೆ ಸಿ.ವೈ.ಟಿ.ಯಡಿ ದುಬಾರಿ ಹಣವನ್ನು ನಿಗದಿ ಪಡಿಸಿದ್ದು ನಿಜವಾದ ಫಲಾನುಭವಿಗಳಿಗೆ ಈ ಸೌಲಭ್ಯ ಪಡೆಯಲು ಅನಾನುಕೂಲವಾಗುವುದಿಲ್ಲವೇ; ವಿವರ ನೀಡುವುದು.

ಈ) ವೈಯಕ್ತಿಕ ಕೊಳವೆ ಬಾವಿ ಪಂಪ್‌ಸೆಟ್ ಸೌಲಭ್ಯಕ್ಕೆ ಪರಿಗಣಿಸಿರುವ ಫಲಾನುಭವಿಗಳ ಸಂಖ್ಯೆ ವಿವರಗಳನ್ನು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುವಾರು. ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು.;

ಉ) ಈ ಯೋಜನೆಯಡಿಯಲ್ಲಿ ಕೊರೆಯಿಸಿದ ಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಬಾಕಿ ಇರುವ ಪ್ರಕರಣಗಳೆಷ್ಟು; ಬೆಸ್ಕಾಂರವರು ನಿರ್ಬಂಧ ಸಡಿಲಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; ವಿವರ ಒದಗಿಸುವುದು?

**ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :**

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ವೈಯಕ್ತಿಕ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.